# ಲಿಂಗಾಯತ ಧರ್ಮ

ಲಿಂಗಾಯತವು ಸ್ವತಂತ್ರ ಧರ್ಮ ಎಂಬ ಚರ್ಚೆ ಮತ್ತೆ ಶುರುವಾಗಿದೆ. ಅದು ಸ್ವತಂತ್ರ ಧರ್ಮವೆ, ಅಲ್ಲವೆ ಎಂಬ ಜಿಜ್ಞಾಸೆಗೆ ಅಲ್ಲಿ ಎಡೆಯೆ ಇಲ್ಲ. ಆದರೂ ಗುರು– ವಿರಕ್ತರ ಹಗ್ಗಜಗ್ಗಾಟ ನಡೆಯುತ್ತಲೇ ಇರುತ್ತದೆ. ಬೌದ್ಧ, ಜೈನ, ಲಿಂಗಾಯತಗಳು ಕೆಸರಿನಿಂದಲೇ ಹುಟ್ಟಿದರೂ ಸ್ವಚ್ಛ ಕಮಲದಂತೆ ಸ್ವತಂತ್ರವಾಗಿ ಅರಳಿನಿಂತಿವೆ. ಕೇವಲ ಲೌಕಿಕ ಹಿತಾಸಕ್ತಿಗಳಿಗಾಗಿ ಈ ಚರ್ಚೆ ಆಗಾಗ ಮುನ್ನೆಲೆಗೆ ಬರುತ್ತದೆ. ಲಿಂಗಾಯತ ಧರ್ಮಕ್ಕೆ ಒಬ್ಬ ಸ್ಥಾಪಕನಿದ್ದಾನೆ– ಬಸವಣ್ಣ. ವಚನಶಾಸ್ತ್ರವೆಂಬ ಧರ್ಮಗ್ರಂಥವಿದೆ. ಬೌದ್ಧ, ಜೈನಗಳಂತೆಯೆ ಅದು ಜನರಾಡುವ ಸ್ಥಳೀಯ ಭಾಷೆಯಲ್ಲಿಯೆ ಕಟ್ಟಲ್ಪಟ್ಟಿದೆ. ಒಂದು ಧರ್ಮವು ಇತರ ಧರ್ಮಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಈ ಮೂರು ನೆಲೆಗಳಲ್ಲಿ ಪರೀಕ್ಷಿಸಬಹುದು. (1) ತತ್ವಶಾಸ್ತ್ರದ ನೆಲೆ
(2) ದೈವಶಾಸ್ತ್ರದ ನೆಲೆ ಮತ್ತು (3) ಸಮಾಜಶಾಸ್ತ್ರೀಯ ನೆಲೆ.

ಸುಮಾರು ಎರಡು ದಶಕಗಳ ಹಿಂದೆ ನಾನು ಗದುಗಿನಲ್ಲಿದ್ದಾಗ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗಮಹಾಸ್ವಾಮಿಗಳ ಸಖ್ಯವಿತ್ತು. ಅವರ ಶಾಖಾ ಮಠಗಳಿಗೆ ನನ್ನನ್ನು ಶಿವಾನುಭವ ಕಾರ್ಯಕ್ರಮಗಳಿಗೆ ಕರೆದೊಯ್ಯುತ್ತಿದ್ದರು. ಒಮ್ಮೆ ನನ್ನ ಉಪನ್ಯಾಸದಲ್ಲಿ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ ಎನ್ನುವುದಕ್ಕೆ ಇದೊಂದು ವಚನ ಸಾಕು ಎಂದು ಇದನ್ನು ಉದಾಹರಿಸಿದೆ.

ಜನ್ಮಜನ್ಮಕೆ ಹೋಗಲೀಯದೆ, ಸೋಹಂ ಎಂದೆನಿಸದೆ/ ದಾಸೋಹಂ ಎಂದೆನಿಸಯ್ಯಾ!/ ಲಿಂಗ ಜಂಗಮದ ಪ್ರಸಾದವ ತೋರಿ ಬದುಕಿಸಯ್ಯಾ!/ ಕೂಡಲಸಂಗಮದೇವಾ.

ಈ ವಚನವನ್ನು ಕೇಳಿದ ಸ್ವಾಮೀಜಿಯವರು ಅದನ್ನು ಹೊಸದಾಗಿ ಕೇಳಿದವರಂತೆ ಹರ್ಷಗೊಂಡರು. ಅಂದೇ ತಮ್ಮ ಗುರುಗಳಾದ ಎಂ.ಎಂ. ಕಲಬುರ್ಗಿಯರೊಡನೆ ಅದರ ಬಗ್ಗೆ ಚರ್ಚಿಸಿದರು. ಅವರೂ ಸಹ ಮರುದಿನವೇ ನನ್ನೊಡನೆ ತಮಗಾದ ಸಂತಸವನ್ನು ಹಂಚಿಕೊಂಡರು.

ವಚನಗಳಲ್ಲಿ ಕೇವಲ ಶಬ್ದದ ಸೊಗಸಷ್ಟೇ ಅಲ್ಲ, ಅರ್ಥದ ಸೊಗಸೂ ನಮ್ಮನ್ನು ಬೆರಗುಗೊಳಿಸುತ್ತದೆ. ಈ ವಚನದಲ್ಲಿ ಬಸವಣ್ಣ ಮೊದಲನೆಯ ಸಾಲಿನಲ್ಲಿ ವೈದಿಕ ತತ್ವವನ್ನು ನಿರಾಕರಿಸಿಬಿಡುತ್ತಾನೆ. ಎರಡನೆಯ ಸಾಲಿನಲ್ಲಿ ತನ್ನ ಧರ್ಮದ ತತ್ವವೇನೆಂಬುದನ್ನು ನಿವೇದಿಸಿಕೊಳ್ಳುತ್ತಾನೆ. ತಾನು ಬದುಕುವ ಪರಿ ಹೀಗಿರಬೇಕೆಂದು ಮೂರನೆಯ ಸಾಲಿನಲ್ಲಿ ಹೇಳಿ ಮುಗಿಸುತ್ತಾನೆ. ಜನ್ಮಜನ್ಮಕೆ ಹೋಗಲೀಯದೆ – ಎಂದರೆ ಪುನರ್ಜನ್ಮವಿಲ್ಲ. ಪುನರ್ಜನ್ಮದ ನಿರಾಕರಣೆ ಕರ್ಮಸಿದ್ಧಾಂತದ ನಿರಾಕರಣೆಯೂ ಹೌದು. ಸೋಹಂ ಎಂದೆನಿಸದಿರಯ್ಯಾ – ಎಂಬ ಸರಳ ಮಾತು 'ಅಹಂ ಬ್ರಹ್ಮಾಸ್ಮಿ' ಎಂಬ ಸಿದ್ಧಾಂತವನ್ನೆ ಛಿದ್ರಗೊಳಿಸುತ್ತದೆ. ದಾಸೋಹಂ ಎಂದೆನಿಸಯ್ಯಾ! ಎಂಥಾ ಅದ್ಭುತ ಕಟ್ಟುವಿಕೆ ಇದೆ ಇಲ್ಲಿ. ಕಾಯಕವಿಲ್ಲದೆ ದಾಸೋಹವಿಲ್ಲ. ಕರ್ಮ ಥಿಯರಿಯಿಲ್ಲದೆ ಪುನರ್ಜನ್ಮವಿಲ್ಲ. ನೋಡಿ, ಪುನರ್ಜನ್ಮ, ಕಾಯಕ ಎಂಬ ಪದಗಳನ್ನು ಬಳಸದೆಯೆ ಅವುಗಳ ಅರ್ಥವನ್ನು ಸ್ಫುಟಗೊಳಿಸುತ್ತಾನೆ ಬಸವಣ್ಣ. ಲಿಂಗ, ಜಂಗಮ, ಪ್ರಸಾದವ ತೋರಿ ಬದುಕಿಸಯ್ಯಾ ಎಂದು ಕೂಡಲಸಂಗಮನಲ್ಲಿ ಮೊರೆಯಿಡುತ್ತಾನೆ. ಹೀಗೆ ತತ್ವಾಧಾರಿತವಾಗಿ ಹಿಂದೂ ಮತ್ತು ಲಿಂಗಾಯತ ಧರ್ಮಗಳು ಮುಖಾಮುಖಿಯಾಗುತ್ತವೆ, ಕೂಡುವುದಿಲ್ಲ.

ದೈವಶಾಸ್ತ್ರದ ನೆಲೆಯಲ್ಲಿ ನೋಡುವುದಾದರೆ ಲಿಂಗಾಯತ ಧರ್ಮ ಆಸ್ತಿಕ ಧರ್ಮವಾದ್ದರಿಂದ ದೇವರನ್ನು ನಂಬುತ್ತದೆ. ಅದು ಶಿವಸ್ವರೂಪಿಯಾದ ಕೂಡಲಸಂಗಮನೆನ್ನುವುದು ನಿರ್ವಿವಾದವಾದರೂ ಅವನು ಶಾಕ್ತ ಪರಂಪರೆಯ ಶಿವನಲ್ಲ. ಅಂಗೈಯ ಮೇಲೆ ಸ್ವಾಯತವಾಗುವ ಲಿಂಗರೂಪಿ. ಏಕದೇವೋಪಾಸನೆಯನ್ನು ಸಾರುವ ಲಿಂಗಾಯತಕ್ಕೆ ಇದೇ ಸರ್ವಸ್ವ. ಅನ್ಯದೈವಕ್ಕೆಳಸಿದರೆ ಅದು ಹಾದರ. ಹೀಗೆ ಒಂದು ಚುಳುಕಾದ ಲಿಂಗ ಮುಕ್ಕೋಟಿ ದೇವತೆಗಳನ್ನು ಹುರಿದು ಮುಕ್ಕಿದೆ. ಬಹುದೇವತಾರಾಧನೆಯನ್ನು ಧಿಕ್ಕರಿಸಿದೆ. ಅಲ್ಲಿ ದೇವಾಲಯಗಳಿಲ್ಲ. ದೇಹವೇ ದೇಹಾರ. ಅನುಭವ ಮಂಟಪವಿದೆ. ಅದು ನೀತಿನಿರೂಪಣೆಗಾಗಿ ಇರುವ ಪ್ರಜಾಪ್ರಭುತ್ವವಾದೀ ವೇದಿಕೆ. ಅಲ್ಲಿ ಮೂಢಾಚರಣೆಗಳಿಲ್ಲ, ಮುಕ್ತ ಚರ್ಚೆ ಇದೆ. ದಾಸೋಹ ನಡೆಯುವ ಸ್ಥಳವನ್ನು ಮಹಾಮನೆಯೆನ್ನುತ್ತಾರೆ. ಸ್ವರ್ಗ, ನರಕಗಳಿಲ್ಲ. ಎಲ್ಲ ಬಯಲು– ಆಲಯ. ಒಂದು ರೀತಿಯಲ್ಲಿ ಇದು ಅಂಬೇಡ್ಕರ್ ಕಲ್ಪಿಸಿದ ನವಯಾನ ಬೌದ್ಧಧರ್ಮಕ್ಕೆ ಹತ್ತಿರವಿದೆ.

ಬಸವಣ್ಣ ಒಂದು ಚಳವಳಿಯನ್ನೆ ಹುಟ್ಟುಹಾಕಿದ. ಅಂದು ಸಮಾಜದಲ್ಲಿ ಬೇರೂರಿದ್ದ ಮೌಢ್ಯ, ಕಂದಾಚಾರ, ಜಾತೀಯತೆ, ಅಸ್ಪೃಶ್ಯತೆ, ಶೋಷಣೆ, ಅಸಮಾನತೆ ಇತ್ಯಾದಿ ಸಾಮಾಜಿಕ ಕಂಟಕಗಳನ್ನು ಬೇರುಸಹಿತ ಕಿತ್ತುಹಾಕುವುದೇ ಚಳವಳಿಯ ಉದ್ದೇಶವಾಗಿತ್ತು. ಆದ್ದರಿಂದ ಲಿಂಗಾಯತವು ಸಮಾಜಮುಖೀ ಧರ್ಮ. ಅಂದಿನ ಕಾಲದಲ್ಲಿ ಶಿಕ್ಷಣವೇತ್ತರು ಎಂದರೆ ವೇದಪಾರಂಗತರು. ಆದರೆ ಅವರು ಮಾಡುತ್ತಿದ್ದ ಅರ್ಥಹೀನ ಆಚರಣೆಗಳು ಶಿಕ್ಷಣವನ್ನೇ ಅಣಕಿಸುವಂತಿದ್ದವು. ಈ ವಚನವನ್ನು ನೋಡಿ.

ನೀರ ಕಂಡಲ್ಲಿ ಮುಳುಗುವರಯ್ಯಾ/ ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ, ಒಣಗುವ ಮರನ/ ಮೆಚ್ಚಿದವರು ನಿಮ್ಮನೆತ್ತ ಬಲ್ಲರು!/ಕೂಡಲಸಂಗಮದೇವಾ.

ಹೀಗೆ ಬಸವಣ್ಣ ಜನರನ್ನು ಎಚ್ಚರಿಸುತ್ತಾ ನಡೆದ. ಇಷ್ಟಲಿಂಗ ಧಾರಣೆಯ ಪರಿಕಲ್ಪನೆ ಸಮಾನತೆಯನ್ನು ತರುವುದೇ ಆಗಿತ್ತು. ಆದ್ದರಿಂದ ಅದು ದೇವೋಪಾಸನೆಗಿಂತಲೂ ಸಾಮಾಜಿಕ ಮನ್ನಣೆಯ ಕುರುಹಾಗಿ ಬೆಳೆಯಿತು. ಕುಲವನರಸುವರೆ ಜಾತಿಸಂಕರವಾದ ಬಳಿಕ? ಲಿಂಗದೀಕ್ಷೆಯನ್ನು ಕರ್ಮಕಾಂಡದ ಧರ್ಮದಿಂದ ಮಹಾನಿರ್ಗಮನ ಎಂದು ತಿಳಿಯಬೇಕು. ಅಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಲಭ್ಯವಿವೆ. ಇವುಗಳನ್ನು ವೈದಿಕ ಶಾಸ್ತ್ರ ಪುರಾಣಗಳಲ್ಲಿ ಹುಡುಕಲು ಬಾರದು. ಜಂಗಮವೆಂದರೆ ಸಮಾಜ. ವ್ಯಕ್ತಿ, ಕುಟುಂಬ, ಸಮಾಜ ಮತ್ತು ರಾಜ್ಯಗಳನ್ನು ಏಕಸೂತ್ರದಲ್ಲಿ ಬೆಸೆಯುವ ಅದ್ಭುತ ಪರಿಕಲ್ಪನೆ ಲಿಂಗ, ಜಂಗಮ, ಪ್ರಸಾದ. ಸಮಾನ ಹಂಚಿಕೆಯೆ ಪ್ರಸಾದದ ಸಾರ. ಇಂತಹ ಅಮೂಲ್ಯ ತತ್ವಗಳನ್ನೊಳಗೊಂಡ ಲಿಂಗವಂತ ಧರ್ಮವನ್ನು ಶಾಕ್ತದ ಒಂದು ಕವಲಾದ ಶೈವದೊಂದಿಗೆ ಬೆರೆಸಿ ಎರಡೂ ಒಂದೇ ಎನ್ನುವುದು ಮಹಾಮಾನವತಾವಾದಿ ಬಸವಣ್ಣನಿಗೆ ಎಸಗುವ ಅಪಚಾರ. ಹಾಗಾದರೆ ವೀರಶೈವ ಹೇಗೆ ಬಂದು ಸೇರಿಕೊಂಡಿತು? ಎಂಬ ಪ್ರಶ್ನೆಗೆ ಕಲಬುರ್ಗಿಯವರು ಸಮರ್ಪಕವಾಗಿ ಉತ್ತರಿಸಿದ್ದಾರೆ. ಇನ್ನೊಂದು ವಚನ ವೇದ, ಶಾಸ್ತ್ರ, ಆಗಮಗಳನ್ನು ಹೊರತೊಲಗಿಸಿದ್ದಕ್ಕೆ ಸಾಕ್ಷಿಯಾಗಿದೆ.

ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದ್ದಿತಯ್ಯಾ!/ ಆಗಮ ತೊಲಗಿ ಅಗಲಿದ್ದಿತಯ್ಯಾ!
ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ.

ಸಾಂಕೇತಿಕವಾಗಿ ಹೇಳುವುದಾದರೆ ಮಾದಾರ ಚೆನ್ನಯ್ಯನ ಮನೆಯಲ್ಲಿ ಉಂಡು ಹಾಗೂ ಹರಳಯ್ಯನ ಮನೆಗೆ ಹೆಣ್ಣು ಕೊಟ್ಟು ಸಂಬಂಧ ಬೆಳೆಸಿ ಜಾತಿಸಂಕರವಾದ ಬಳಿಕ ಉಂಟಾದ ಧರ್ಮವೇ ಲಿಂಗಾಯತ. ಈ ಸಂಶಯಾತೀತ ಸತ್ಯವನ್ನರಿಯದ ಅನ್ಯಕುಲಜರು ಕೊಟ್ಟಣವ ಕುಟ್ಟುತ್ತೈದಾರೆ!

■ ಮೂಚಿ

## ಮಾತೇ ಮುತ್ತು

★ ಒಳ್ಳೆಯ ಗೆಳೆತನ ಮತ್ತು ಒಳ್ಳೆಯ ನಡವಳಿಕೆ ನಿಮ್ಮನ್ನು ಹಣ ಕೂಡಾ ತಲುಪಿಸಲಾಗದ ಸ್ಥಳಕ್ಕೆ ಕೊಂಡೊಯ್ಯುತ್ತದೆ.
—ಮಾರ್ಗರೆಟ್ ವಾಕರ್

★ ಮನುಷ್ಯ ತನ್ನೊಳಗಿನ ಸ್ವಾರ್ಥವನ್ನು ತೊಲಗಿಸಿದರೆ, ಅತ್ಯುತ್ತಮ ತೃಪ್ತಿ ಮತ್ತು ಶಾಶ್ವತ ಶಾಂತಿ ಲಭಿಸುತ್ತದೆ.
—ಗುರು ಗೋವಿಂದ ಸಿಂಗ್

★ ಇಡೀ ಜಗತ್ತನ್ನೇ ಗೆದ್ದರೂ ನಿನ್ನ ಆತ್ಮವನ್ನು ನೀನು ಕಳೆದುಕೊಂಡರೆ, ಗೆದ್ದೇನು ಪ್ರಯೋಜನ?
—ಯೇಸು ಕ್ರಿಸ್ತ

★ ನಿನ್ನ ಕೋಪಕ್ಕಾಗಿ ನಿನ್ನನ್ನು ಶಿಕ್ಷಿಸಲಾಗುವುದಿಲ್ಲ. ನಿನ್ನ ಕೋಪವೇ ನಿನ್ನನ್ನು ಶಿಕ್ಷಿಸುತ್ತದೆ.
—ಗೌತಮ ಬುದ್ಧ

★ ನ್ಯಾಯ ನಿನ್ನ ಪರವಾಗಿದ್ದರೂ ಸರಿಯೇ, ತಾಯಿಯ ಜತೆಗೆ ವಾದ ಮಾಡಬೇಡ. ಆಕೆ ಒಮ್ಮೆ 'ಛೆ' ಅಂದರೂ ಅದು ನಿನಗೆ ಶಾಪವಾದೀತು.
—ಮುಹಮ್ಮದ್ ಪೈಗಂಬರ್

★ ಬುದ್ಧಿವಂತನಾದವನು ಯಾವ ಮೋಹವೂ ಇಲ್ಲದೆ ಸಮಾಜದ ಒಳಿತಿಗಾಗಿ ದುಡಿಯುತ್ತಾನೆ.
—ಭಗವದ್ಗೀತೆ